**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 881 (1006) |
| ಸದಸ್ಯರ ಹೆಸರು: | ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | 17.12.2024 |
| ಉತ್ತರಿಸುವವರು: | ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿರುವ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಈ ಸಮಸ್ಯೆ ಪರಿಹರಿಸಲು ನಗರಸಭೆ ಕೈಗೊಂಡಿರುವ ಕ್ರಮಗಳಾವುವು? (ವಿವರ ನೀಡುವುದು) | ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>• ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ಯಾವುದೇ ಜಲಮೂಲಗಳು ಇಲ್ಲದಿರುವುದರಿಂದ ಕುಡಿಯುವ ನೀರಿನ ಮೂಲ ಕೊಳವೆ ಬಾವಿಗಳ ಮೇಲೆ ಅವಲಂಬಿತವಾಗಿರುತ್ತದೆ. ಹಿಂದಿನ ಹಾಗೂ ಪ್ರಸಕ್ತ ಸಾಲಿನಲ್ಲಿ ಮಳೆಯ ಅಭಾವದಿಂದ ಕೊಳವೆ ಬಾವಿಗಳಲ್ಲಿ ಅಂತರ್ಜಲ ಮಟ್ಟ ಕಡಿಮೆಯಾಗಿರುತ್ತದೆ.<br>• ಚಿಕ್ಕಬಿದರಕಲ್ಲು ಮತ್ತು ತೋಟದ ಗುಡ್ಡದಹಳ್ಳಿ ಗ್ರಾಮಗಳ ಭಾಗಶಃ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬೇಸಿಗೆಯಲ್ಲಿ ಹೆಚ್ಚಾಗುತ್ತಿದೆ.<br>• ಬೇಸಿಗೆ ಸಮಯದಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗಿದೆ. ನೀರಿನ ಸಮಸ್ಯೆ ಬಗೆಹರಿಸಲು ತೋಟದ ಸಾಲಿನ ರಸ್ತೆಯಲ್ಲಿ ಕೊಳವೆಬಾವಿ ಕೊರೆದು ಪೈಪ್‌ಲೈನ್ ಅಳವಡಿಸಿ ನೀರು ಸರಬರಾಜು ಮಾಡಲಾಗಿದೆ ಹಾಗೂ ಹಾಲಿ ಇರುವ ಕೊಳವೆಬಾವಿಗಳಲ್ಲಿ ನೀರಿನ ಪ್ರಮಾಣ ಕಡಿಮೆಯಾದ ಕಾರಣ ಬೋರ್‌ವೆಲ್ ರೀ ಡ್ರಿಲ್ಲಿಂಗ್ ಕಾಮಗಾರಿ ಕೈಗೊಂಡು ಕುಡಿಯುವ ನೀರಿನ ಪೂರೈಕೆ ಮಾಡಿ ಸಮಸ್ಯೆ ಬಗೆಹರಿಸಲಾಗಿದೆ.<br>• ಅವಶ್ಯಕವಿರುವ ಚಿಕ್ಕಬಿದರಕಲ್ಲು, ಅಂಚೆಪಾಳ್ಯ, ಗಂಗೊಂಡನಹಳ್ಳಿ, ಲಕ್ಷ್ಮೀಪುರ, ತೋಟದಗುಡ್ಡದಹಳ್ಳಿ, ದೊಂಬರಹಳ್ಳಿ, ಸಿದ್ದನಹೊಸಹಳ್ಳಿ ಮತ್ತು ಕೆ.ಜಿ.ಲಕ್ಕೇನಹಳ್ಳಿಯಲ್ಲಿ ಹೊಸದಾಗಿ ಕೊಳವೆಬಾವಿ ಕೊರೆದು ಕುಡಿಯುವ ನೀರನ್ನು ಪೂರೈಸಲಾಗಿದೆ. |

| | | |
|---|---|---|
| ಆ) | ಪ್ರಸ್ತುತ ಎಷ್ಟು ದಿನಗಳಿಗೊಮ್ಮೆ ನೀರನ್ನು ಪೂರೈಸಲಾಗುತ್ತಿದೆ; ಗ್ರಾಮಸ್ಥರು ಕುಡಿಯುವ ನೀರಿನ ದರವನ್ನು ಆಸ್ತಿ ತೆರಿಗೆಯಲ್ಲಿ ಪಾವತಿಸುತ್ತಿದ್ದಾರೆಯೇ; ಯಾವ ಮಾನದಂಡದ ಮೇಲೆ ಎಷ್ಟೆಷ್ಟು ದರವನ್ನು ನಿಗದಿಪಡಿಸಲಾಗಿರುತ್ತದೆ. | • ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ಪ್ರಸ್ತುತ 12 ವಾರ್ಡ್‌ಗಳಲ್ಲಿ 02 ದಿನಗಳಿಗೊಮ್ಮೆ, 15 ವಾರ್ಡ್‌ಗಳಲ್ಲಿ 03 ದಿನಗಳಿಗೊಮ್ಮೆ ಹಾಗೂ 04 ವಾರ್ಡ್‌ಗಳಲ್ಲಿ 05 ದಿನಕ್ಕೊಮ್ಮೆ ಕುಡಿಯುವ ನೀರು ಪೂರೈಸಲಾಗುತ್ತಿದೆ.<br>• ಕುಡಿಯುವ ನೀರಿನ ದರವನ್ನು ಆಸ್ತಿ ತೆರಿಗೆಯಲ್ಲಿ ಪಾವತಿಸದೇ ಪ್ರತ್ಯೇಕವಾಗಿ ಪಾವತಿಸಿರುತ್ತಾರೆ.<br>• ನೀರಿನ ದರ ನಿರ್ಣಯದ ಕುರಿತು ಸರ್ಕಾರದ ಆದೇಶ ಸಂಖ್ಯೆ: ನಅಇ 07 ಯೂಡಬ್ಲ್ಯೂಎಸ್ 2011 ಬೆಂಗಳೂರು, ದಿನಾಂಕ: 20.07.2011 ಆದೇಶದನ್ವಯ ಹಾಗೂ ದಿನಾಂಕ: 27-02-2024 ರಂದು ನಗರಸಭೆಯ ಮಾನ್ಯ ಆಡಳಿತಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯ ಅನುಮೋದನೆಯಂತೆ 2024-25 ನೇ ಸಾಲಿಗೆ ಮಾಸಿಕವಾಗಿ ವಾಸದ ಬಳಕೆಗೆ- ರೂ.160/-, ವಾಸೇತರ- ರೂ.360/-, ವಾಣಿಜ್ಯ/ ಕೈಗಾರಿಕೆಗಳಿಗೆ- ರೂ.720/-ರಂತೆ ವಸೂಲಿ ಮಾಡಲಾಗಿದೆ. **ಪ್ರತಿಯನ್ನು ಅನುಬಂಧ-1ರಲ್ಲಿ** ನೀಡಲಾಗಿದೆ. |
| ಇ) | ಚಿಕ್ಕಬಿದರಕಲ್ಲು ಗ್ರಾಮಸ್ಥರು ಕುಡಿಯುವ ನೀರಿನ ಸಮಸ್ಯೆಯನ್ನು ಪರಿಗಣಿಸಲು ಮನವಿ ಮಾಡಿದ್ದರೂ ನೀರಿನ ಸಮಸ್ಯೆಯನ್ನು ಬಗೆಹರಿಸದಿರುವುದು ನಿಜವೇ; ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು? | ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಚಿಕ್ಕಬಿದರಕಲ್ಲು ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಯನ್ನು ಪರಿಹರಿಸಲು ಗಂಭೀರವಾಗಿ ಪರಿಗಣಿಸಿದ್ದು, ಈ ಕೆಳಕಂಡಂತೆ ಕ್ರಮ ವಹಿಸಲಾಗುತ್ತಿದೆ.<br>• ಚಿಕ್ಕಬಿದರಕಲ್ಲು ಭಾಗಶಃ ವ್ಯಾಪ್ತಿಯ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ತೋಟದ ಸಾಲಿನ ರಸ್ತೆಯಲ್ಲಿ ಕೊಳವೆಬಾವಿ ಕೊರೆದು ಪೈಪ್‌ಲೈನ್ ಅಳವಡಿಸಿ ನೀರು ಸರಬರಾಜು ಮಾಡಲಾಗಿದೆ ಹಾಗೂ ಹಾಲಿ ಇರುವ ಕೊಳವೆ ಬಾವಿಗಳಲ್ಲಿ ನೀರಿನ ಪ್ರಮಾಣ ಕಡಿಮೆಯಾದ ಕಾರಣ ಬೋರ್‌ವೆಲ್ ರೀ ಡ್ರಿಲ್ಲಿಂಗ್ ಕಾಮಗಾರಿ ಕೈಗೊಂಡು ಕುಡಿಯುವ ನೀರಿನ ಪೂರೈಕೆ ಮಾಡಲಾಗಿದೆ.<br>• ಹೊಸದಾಗಿ 02 ಕೊಳವೆ ಬಾವಿಗಳನ್ನು ಕೊರೆದು ಕುಡಿಯುವ ನೀರನ್ನು ಪೂರೈಸಲಾಗುತ್ತಿದೆ. ಕಾಮಗಾರಿಗಳನ್ನು ನಿರ್ವಹಿಸಿ ನೀರಿನ ಸಮಸ್ಯೆಯನ್ನು ಬಗೆಹರಿಸಲಾಗುತ್ತಿದೆ.<br>• ಕೊಳವೆ ಬಾವಿಗಳ ಅಂತರ್ಜಲ ಮಟ್ಟ ಹೆಚ್ಚಿಸಲು ಮಳೆನೀರು ಕೊಯ್ಲು ಕಾಮಗಾರಿಯನ್ನು ಕೈಗೊಳ್ಳಲಾಗಿರುತ್ತದೆ. |
| ಈ) | ಸದರಿ ಗ್ರಾಮದಲ್ಲಿ ಕೊಳವೆ ಬಾವಿಗಳಿಂದ ಉಪ್ಪಿನ ಅಂಶವನ್ನೊಳಗೊಂಡ ಅತ್ಯಂತ ಕಡಿಮೆ ಪ್ರಮಾಣ ನೀರನ್ನು ವಾರಕ್ಕೊಮ್ಮೆ | ಕೊಳವೆ ಬಾವಿಯ ನೀರಿನ ಪರೀಕ್ಷೆಗೆ ಒಳಪಡಿಸಿದ್ದು, ಹೆಚ್ಚಿನ ಲವಣಾಂಶ ಯಾವುದೇ ಕೊಳವೆ ಬಾವಿಯಲ್ಲಿ ಕಂಡು ಬಂದಿರುವುದಿಲ್ಲ. ಸದರಿ ಗ್ರಾಮದಲ್ಲಿ |

| | | |
|---|---|---|
| | | ಹೆಚ್ಚಿಸಲು ಮಳೆನೀರು ಕೊಯ್ಲು ಕಾಮಗಾರಿಯನ್ನು ಕೈಗೊಳ್ಳಲಾಗಿರುತ್ತದೆ. |
| ಈ) | ಸದರಿ ಗ್ರಾಮದಲ್ಲಿ ಕೊಳವೆ ಬಾವಿಗಳಿಂದ ಉಪ್ಪಿನ ಅಂಶವನ್ನೊಳಗೊಂಡ ಅತ್ಯಂತ ಕಡಿಮೆ ಪ್ರಮಾಣ ನೀರನ್ನು ವಾರಕ್ಕೊಮ್ಮೆ ಪೂರೈಸುತ್ತಿರುವುದು ನಿಜವೇ; ಹಾಗಿದ್ದಲ್ಲಿ, ಶುದ್ಧ ನೀರನ್ನು ಪೂರೈಸಲು ಕೈಗೊಳ್ಳುವ ಕ್ರಮಗಳೇನು? | ಕೊಳವೆ ಬಾವಿಯ ನೀರಿನ ಪರೀಕ್ಷೆಗೆ ಒಳಪಡಿಸಿದ್ದು, ಹೆಚ್ಚಿನ ಲವಣಾಂಶ ಯಾವುದೇ ಕೊಳವೆ ಬಾವಿಯಲ್ಲಿ ಕಂಡು ಬಂದಿರುವುದಿಲ್ಲ. ಸದರಿ ಗ್ರಾಮದಲ್ಲಿ ಕುಡಿಯುವ ನೀರನ್ನು 05 ದಿನಗಳಿಗೊಮ್ಮೆ ಪೂರೈಸಲಾಗುತ್ತಿದೆ. |
| ಉ) | ಬೆಂಗಳೂರಿಗೆ ಸಮೀಪದ ಪರಿಮಿತಿಯಲ್ಲಿರುವ ಸದರಿ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು; ಮತ್ತು ಯಾವ ಕಾಲಮಿತಿಯಲ್ಲಿ ಪರಿಹರಿಸಲಾಗುವುದು? (ವಿವರ ನೀಡುವುದು). | ಚಿಕ್ಕಬಿದರಕಲ್ಲು ಗ್ರಾಮವು ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿದ್ದು, ಕೇಂದ್ರ ಪುರಸ್ಕೃತ ಅಮೃತ್ 2.0 ಯೋಜನೆಯಡಿ ಮಾದನಾಯಕನಹಳ್ಳಿ ನಗರಕ್ಕೆ ರೂ.44.00ಕೋಟಿ (SWAP Amount) ಅನುದಾನ ಹಂಚಿಕೆ ಆಗಿರುತ್ತದೆ. ಸದರಿ ಅನುದಾನದಡಿ ಮಾದನಾಯಕನಹಳ್ಳಿ ನಗರ ವ್ಯಾಪ್ತಿಯಲ್ಲಿ ನೀರು ಸರಬರಾಜು ಅಭಿವೃದ್ಧಿ ಕಾಮಗಾರಿಗಳಿಗೆ ರೂ.49.12ಕೋಟಿಗಳಿಗೆ ಕೊಳವೆ ಬಾವಿ ಮೂಲದಿಂದ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ SLTC ಸಭೆಯಲ್ಲಿ ಮಂಡಿಸಲಾಗಿತ್ತು. ಸದರಿ ಸಭೆಯಲ್ಲಿ ಶಾಶ್ವತ ಮೇಲ್ಮೈ ಮೂಲ ಅಥವಾ ಎತ್ತಿನಹೊಳೆ ಯೋಜನೆ ಅನುಷ್ಠಾನದ ನಂತರ ಪ್ರಸ್ತಾವನೆಯನ್ನು ಕೈಗೊಳ್ಳುವಂತೆ ತಿಳಿಸಿ ತಿರಸ್ಕರಿಸಲಾಗಿದೆ.<br><br>ಮುಂದುವರೆದು, ಬಿ.ಡಬ್ಲ್ಯು.ಎಸ್.ಎಸ್.ಬಿ ವತಿಯಿಂದ ನೀರಿನ ಹಂಚಿಕೆ ಮಾಡುವುದು ಸಾಧ್ಯವಿಲ್ಲವೆಂದು ತಿಳಿಸಿ, ಮುಂದಿನ / ಮುಂಬರುವ ಯೋಜನೆಯಡಿಯಲ್ಲಿ ಪ್ರಸ್ತಾವನೆಯನ್ನು ಪರಿಗಣಿಸುವುದಾಗಿ ಬಿ.ಡಬ್ಲ್ಯು.ಎಸ್.ಎಸ್.ಬಿ ಅಧ್ಯಕ್ಷರು ಪತ್ರ ಸಂಖ್ಯೆ:21.09.2024ರಲ್ಲಿ ತಿಳಿಸಿರುತ್ತಾರೆ.<br><br>ಶಾಶ್ವತ ಮೇಲ್ಮೈ ಮೂಲ ಅಥವಾ ಬಿ.ಡಬ್ಲ್ಯು.ಎಸ್.ಎಸ್.ಬಿ ವತಿಯಿಂದ ಕಾವೇರಿ ನೀರನ್ನು ಹಂಚಿಕೆ ಮಾಡಿದಲ್ಲಿ ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ನೀರು ಸರಬರಾಜು ಅಭಿವೃದ್ಧಿ ಕಾಮಗಾರಿಯ ಪ್ರಸ್ತಾವನೆಯನ್ನು ಮರು ಸಲ್ಲಿಸಲಾಗುವುದು.<br><br>**15ನೇ ಹಣಕಾಸು ಯೋಜನೆ;**<br><br>2024-25ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ಮೊತ್ತ 313.00 ಲಕ್ಷಗಳು ಹಂಚಿಕೆಯಾಗಿದ್ದು, ಕ್ರಿಯಾ ಯೋಜನೆ ಪ್ರತಿಯನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |

| | | |
|---|---|---|
| | | **ಎಸ್‌ಎಫ್‌ಸಿ ಕುಡಿಯುವ ನೀರು ಯೋಜನೆ;**<br>ಬೆಂಗಳೂರಿಗೆ ಸಮೀಪದ ಪರಿಮಿತಿಯಲ್ಲಿರುವ ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಚಿಕ್ಕಬಿದರಕಲ್ಲು ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು, ಸರ್ಕಾರದಿಂದ ಎಸ್‌ಎಫ್‌ಸಿ ಕುಡಿಯುವ ನೀರು ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಹಂಚಿಕೆ ಮಾಡಿ, ಬಿಡುಗಡೆ ಮಾಡಲಾದ ಅನುದಾನದಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ವಿವರ ಗಳನ್ನು ಹಾಗೂ ವೆಚ್ಚದ ವಿವರಗಳನ್ನು **ಅನುಬಂಧ-3**ರಲ್ಲಿ ನೀಡಲಾಗಿದೆ. |

ಸಂಖ್ಯೆ: ನಅಇ 275 ಜಿಇಎಲ್ 2024 (ಇ)

(ರಹೀಂ ಖಾನ್)
**ಪೌರಾಡಳಿತ ಮತ್ತು ಹಜ್**
**ಸಚಿವರು**

ಸಭೆಗೆ ಹಾಜರಿದ್ದ ಸಭಾಸದಸ್ಯರ ಸಂಖ್ಯೆ :

ಅನುಬಂಧ-01. (10)

# ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ


ಬೆಂಗಳೂರು ಉತ್ತರ ತಾಲ್ಲೂಕು. ಬೆಂಗಳೂರು ನಗರ ಜಿಲ್ಲೆ – 562123.

Email : [illegible]@yahoo.com ದೂರವಾಣಿ ಸಂಖ್ಯೆ: 080[illegible]


"ಸಾಮಾನ್ಯ ಸಭೆ"

ದಿನಾಂಕ:- 27.02.2024ರಂದು ನಗರಸಭೆಯ ಮಾನ್ಯ ಆಡಳಿತಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು, ಬೆಂಗಳೂರುರವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯ ನಡಾವಳಿಗಳು.

| ಕ್ರ.ಸಂ | ವಿಷಯ | ತೀರ್ಮಾನ |
|---|---|---|
| 1. | ದಿನಾಂಕ:05.02.2024ರಂದು ನಡೆದ ಸಾಮಾನ್ಯ ಸಭೆಯ ನಡಾವಳಿಗಳನ್ನು ಓದಿ ದಾಖಲು ಮಾಡುವ ಬಗ್ಗೆ | ದಿನಾಂಕ:05/02/2024 ರಂದು ನಡೆದ ಸಾಮಾನ್ಯ ಸಭೆಯ ನಡಾವಳಿಯನ್ನು ಓದಿ ಸ್ಥಿರೀಕರಿಸಲಾಯಿತು. |
| 2. | ಜನವರಿ-2024ರವರೆಗಿನ ಜಮಾ ಮತ್ತು ಖರ್ಚನ್ನು ಅನುಮೋದಿಸುವ ಬಗ್ಗೆ. | ಚರ್ಚಿಸಲಾಗಿ, ಜನವರಿ-2024ರ ವರೆಗಿನ ಜಮಾ ಮತ್ತು ಖರ್ಚನ್ನು ಅನುಮೋದಿಸಲು ತೀರ್ಮಾನಿಸಲಾಯಿತು. ಸದರಿ ಮಾಹೆಗಳಲ್ಲಿ ಸಭೆಯ ಘಟನೋತ್ತರ ಮಂಜೂರಾತಿ ನಿರೀಕ್ಷಿಸಿ ನಿರ್ವಹಿಸಿರುವ ಕಾಮಗಾರಿ ಮತ್ತು ಇತರೆ ಪಾವತಿಸಲಾಗಿರುವ ಬಿಲ್ಲು ಟೆಂಡರ್/ಕೊಟೇಷನ್‌ಗಳಿಗೆ ಘಟನೋತ್ತರ ಅನುಮೋದನೆ ಹಾಗೂ ದರ ಅನುಮೋದನೆಯನ್ನು ಸಭೆಯಲ್ಲಿ ನೀಡಲಾಯಿತು.<br><br>ಕ್ರ.ಸಂ \| ಮಾಹೆ \| ಜಮಾ \| ಖರ್ಚು<br>1. \| ಜನವರಿ-2022 \| 1,07,69,056=00 \| 2,21,29,971=00 |
| 3. | ಮಾದನಾಯಕನಹಳ್ಳಿ ನಗರಸಭೆಗೆ 1 ಸಂಖ್ಯೆ ಫೀಲ್ಡ್ ಸ್ಕಿಡ್‌ಸ್ಟೀರ್ ಲೋಡರ್ ವಾಹನವನ್ನು ಖರೀದಿಸುವ ಕೆಲಸಕ್ಕೆ. (2021–22ನೇ Non – Million Plus City ಗೆ ಹಂಚಿಕೆಯಾದ 15ನೇ ಹಣಕಾಸು ಅನುದಾನ) ಕ್ರಿಯಾಯೋಜನೆ ಅನುಮೋದನೆಯಾಗಿದ್ದು, ಸದರಿ ವಾಹನದ ಹೆಚ್ಚುವರಿ ಮೊತ್ತವನ್ನು ಲಭ್ಯವಿರುವ ನಗರಸಭೆ ನಿಧಿಯಿಂದ ಭರಿಸುವ ಬಗ್ಗೆ. | ಚರ್ಚಿಸಲಾಗಿ, ಮಾದನಾಯಕನಹಳ್ಳಿ ನಗರಸಭೆಗೆ 1 ಸಂಖ್ಯೆ ಫೀಲ್ಡ್ ಸ್ಕಿಡ್ ಸ್ಟೀರ ಲೋಡರ್ ವಾಹನವನ್ನು ಖರೀದಿಸುವ ಕೆಲಸಕ್ಕೆ. (2021–22ನೇ Non – Million Plus City ಗೆ ಹಂಚಿಕೆಯಾದ 15ನೇ ಹಣಕಾಸು ಅನುದಾನ) ಕ್ರಿಯಾಯೋಜನೆ ಅನುಮೋದನೆಯಾಗಿದ್ದು, ಸದರಿ ವಾಹನದವನ್ನು ಖರೀದಿಸಲು ಅಂದಾಜು ಮೊತ್ತ ರೂ.36,00,000/-ಗಳಾಗಿದ್ದು, ಅದರಂತೆ 2021–22ನೇ Non – Million Plus City ಗೆ ಹಂಚಿಕೆಯಾದ 15ನೇ ಹಣಕಾಸು ಅನುದಾನ ದಡಿ ಮೊತ್ತ ರೂ.23,04,000/-ಗಳನ್ನು ನಿಗಧಿಪಡಿಸಿದ್ದು, ಉಳಿಕೆ ಮೊತ್ತ ರೂ.12,96,000/-ಗಳನ್ನು ಲಭ್ಯವಿರುವ ನಗರಸಭೆ ನಿಧಿಯಿಂದ ಭರಿಸಲು ಸಭೆಯಲ್ಲಿ ಅನುಮೋದಿಸಿ ತೀರ್ಮಾನಿಸಲಾಯಿತು. |

(signature)

ಮುಸ್ಸಿಡ



| | | | | | | |
|---|---|---|---|---|---|---|
| C2 | Capital Payments | 48322528 | 212700000 | 41558739 | 142200000 | 248200000 |
| | Cash Surplus (deficit) on Capital Account | 32439649 | 105700000 | -17588739 | -11700000 | -151200000 |
| | Extraordinary Account | | | | | |
| D1 | Extraordinary Receipts | 197093869 | 278910000 | 61503498 | 304010000 | 322610000 |
| D2 | ಪಾವತಿಗಳು Extraordinary Payments | 316403213 | 322310000 | 86060710 | 274010000 | 296010000 |
| | ಹೆಚ್ಚುವರಿ ಬಾಕಿ | -119309344 | -43400000 | -19255212 | 30000000 | 26600000 |
| E | ಒಟ್ಟು ಹೆಚ್ಚುವರಿ/(ಕೊರತೆ) | 2818679 | 13889000 | 34373541 | 158854000 | 25589000 |
| ಅಂತಿಮ ಶಿಲ್ಕು CLOSINGBALANCE (A+E) | | | | | | |
| | ನಗದು ಮತ್ತು ಬ್ಯಾಂಕ್ ಶಿಲ್ಕುಗಳು (ಪ್ರಧಾನ ಸಂಕೇತ 47) Cash & Bank balances (Major code 47) | 9,94,08,715 | 10,72,33,159 | 31,86,27,221 | 9,11,67,715 | 10,50,56,715 |

| | | |
|---|---|---|
| 14 | 2024-25ನೇ ಸಾಲಿನಿಂದ ಮಾದನಾಯಕನಹಳ್ಳಿ ನಗರಸಭೆಯ ವ್ಯಾಪ್ತಿಯ ಕುಡಿಯುವ ನೀರಿಗೆ ಮಾಹೆಯಾನ ನೀರಿನ ಮತ್ತು ಒಳಚರಂಡಿ ನಿರ್ವಹಣೆಯ ಬಗ್ಗೆ ದರ ನಿಗದಿಪಡಿಸುವ ಬಗ್ಗೆ. | ಚರ್ಚಿಸಲಾಗಿ, ಸರ್ಕಾರದ ಆದೇಶ ಮತ್ತು ನಿಯಮಗಳಂತೆ ಕುಡಿಯುವ ನೀರಿನ ದರವನ್ನು ಪ್ರತಿ 3ವರ್ಷಕ್ಕೊಮ್ಮೆ ಹೆಚ್ಚಿಸಬೇಕಿರುತ್ತದೆ ಅದರಂತೆ ಮಾದನಾಯಕನಹಳ್ಳಿ ನಗರಸಭೆ ಮೇಲ್ದರ್ಜೆಗೇರಿದಾಗ 2021-22ರ ಸಾಲಿನಲ್ಲಿ ಕುಡಿಯುವ ನೀರಿನ ದರವನ್ನು ನಿಗಧಿಪಡಿಸಲಾಗಿರುತ್ತದೆ. 3 ವರ್ಷ ಮುಕ್ತಾಯವಾಗಿರುವುದರಿಂದ 2024-25ನೇ ಸಾಲಿನಿಂದ ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ಮತ್ತು ಒಳಚರಂಡಿ ನಿರ್ವಹಣೆಗೆ ಮಾಹೆಯಾನ ಈ ಕೆಳಕಂಡಂತೆ ದರ ನಿಗಧಿಪಡಿಸಲು ಸಭೆಯಲ್ಲಿ ಒಪ್ಪಿ ತಿರ್ಮಾನಿಸಲಾಯಿತು. |

ಸಭೆಗೆ ಹಾಜರಿದ್ದ ಸಭಾಸದಸ್ಯರ ಸಂಖ್ಯೆ :

| ಕ್ರ ಸಂ | ಬಳಕೆಯ ವಿಧ | ಅನುಮೋದಿತ ನೀರಿನ ದರ ಮಾಹೆಯಾನ | ಒಳಚರಂಡಿ ದರ ಮಾಹೆಯಾನ | ಹೊಸ ನಳಸಂಪರ್ಕ ಠೇವಣಿ | ಹೊಸ ಒಳಚರಂಡಿ ಸಂಪರ್ಕಗಳಿಗೆ |
|---|---|---|---|---|---|
| 1. | ಗೃಹ ಬಳಕೆ | 160/- | 80/- | 6,000/- | 6,000/- |
| 2. | ವಾಣಿಜ್ಯ ಬಳಕೆ | 320/- | 160/- | 12,000/- | 12,000/- |

| | | |
|---|---|---|
| 15. | ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿನ ಶಾಲಾ ಕಟ್ಟಡಗಳಿಗೆ ಆಸ್ತಿ ತೆರಿಗೆ ಬದಲಾಗಿ ಸೇವಾ ಶುಲ್ಕವನ್ನು ವಿಧಿಸುವ ಬಗ್ಗೆ. | ಚರ್ಚಿಸಲಾಗಿ, ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ಬರುವ ಖಾಸಗಿ ಶಾಲಾ ಕಟ್ಟಡಗಳಿಗೆ ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯದ ಪತ್ರ ಸಂಖ್ಯೆ 2178 ಡಿಎಂಎ 186 ಡಿಬಿಯುಟಿ 2017-18 ದಿನಾಂಕ 23.02.2018ರಂತೆ ಮತ್ತು ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ಕಲಂ 94(ಬಿ)(ii) ರಲ್ಲಿ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಿಂದ ಶೈಕ್ಷಣಿಕ ಉದ್ದೇಶಕ್ಕಾಗಿ ಮಾತ್ರವೇ ಬಳಸುತ್ತಿರುವ ಕಟ್ಟಡಗಳು ಅಥವಾ ಖಾಲಿ ಭೂಮಿಗಳು ಇವುಗಳಿಗೆ ಮಾತ್ರ ತೆರಿಗೆ ವಿನಾಯಿತಿಗಳು ಮತ್ತು ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ಕಲಂ 94(2) ರಲ್ಲಿ ಮಂಜೂರು ಮಾಡಿದ ಕಟ್ಟಡಗಳಿಗೆ ವಿನಾಯಿತಿಯನ್ನು, ಮೇಲ್ಕಂಡ ಸುತ್ತೋಲೆಯಲ್ಲಿನ ಷರತ್ತಿಗೆ ಒಳಪಟ್ಟಿರುವಂತಹ ಖಾಸಗಿ ಶಾಲೆಯ ಕಟ್ಟಡಗಳಿಗೆ ಮತ್ತು ಭೂಮಿಗೆ ಆಸ್ತಿ ತೆರಿಗೆ ಬದಲಾಗಿ ಸೇವಾ ಶುಲ್ಕವನ್ನು, ಮೂಲ ತೆರಿಗೆಯ ಮೊತ್ತದ ಮೇಲೆ ಶೇ25% ವಿಧಿಸುವ ಸಭೆಯಲ್ಲಿ ಒಪ್ಪಿ ತೀರ್ಮಾನಿಸಲಾಯಿತು. |
| 16. | ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ 2023-24ನೇ ಸಾಲಿನ ನಗರಸಭೆ ನಿಧಿ ಅನುದಾನ ಮತ್ತು 2021-22ನೇ ಸಾಲಿನ 15ನೇ ಹಣಕಾಸು MPC ಅನುದಾನದ ಅಡಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿದ್ದು, ಇ-ಪ್ರೊಕ್ಯೂರ್ ಮೆಂಟ್ ವೇದಿಕೆಯಡಿಯಲ್ಲಿ ಟೆಂಡರ್ ಕರೆದಿರುವ ಕಾಮಗಾರಿಗಳ ಟೆಂಡರ್ ದರಗಳನ್ನು ಅನುಮೋದಿಸುವ ಬಗ್ಗೆ. | ಚರ್ಚಿಸಲಾಗಿ 2023-24ನೇ ಸಾಲಿನ ನಗರಸಭೆ ನಿಧಿ ಅನುದಾನ ಮತ್ತು 2021-22ನೇ ಸಾಲಿನ 15ನೇ ಹಣಕಾಸು MPC ಅನುದಾನದ ಅಡಿಯಲ್ಲಿ ಟೆಂಡರ್ ಕರೆದಿರುವ ಕಾಮಗಾರಿಗಳ ಟೆಂಡರ್ ದರಗಳನ್ನು ತಾಂತ್ರಿಕ ಪರಿಶೀಲನಾ ಸಮಿತಿಯ ಶಿಫಾರಸ್ಸಿನಂತೆ ಟೆಂಡರ್‌ನಲ್ಲಿ ನಮೂದಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ ತಾಂತ್ರಿಕವಾಗಿ ಅರ್ಹರಾಗಿರುವ ಗುತ್ತಿಗೆದಾರರನ್ನು ನಮೂದಿಸಲಾಗಿದ್ದು, ತಾಂತ್ರಿಕವಾಗಿ ಅರ್ಹರಾಗಿರುವ ಗುತ್ತಿಗೆದಾರರ ಆರ್ಥಿಕ ಬಿಡ್ ತೆರೆಯಲು ಹಾಗೂ ನಿಯಮಗಳ ಅನ್ವಯ ಕಡಿಮೆ ದರ ನಮೂದಿಸಿದ್ದಲ್ಲಿ ದರವನ್ನು ಅನುಮೋದಿಸಲು ಒಪ್ಪಿ ಸಭೆಯಲ್ಲಿ ತೀರ್ಮಾನಿಸಲಾಯಿತು. |

| ಕ್ರ ಸಂ | ಕಾಮಗಾರಿ ಹೆಸರು/ ಇಂಡೆಂಟ್ ಸಂಖ್ಯೆ | ಟೆಂಡರ್‌ಗಿಟ್ಟ ಮೊತ್ತ ಲಕ್ಷಗಳಲ್ಲಿ | ಗುತ್ತಿಗೆದಾರರ ಹೆಸರು ಮತ್ತು ನಮೂದಿಸಿರುವ ಶೇಕಡಾವಾರು ದರ | ಅನುಮೋದನೆಗೆ ಅರ್ಹವಿರುವ ಗುತ್ತಿಗೆದಾರರ ಹೆಸರು ಮತ್ತು ಮೊತ್ತ |
|---|---|---|---|---|
| 1. | ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ನೀರು ಸರಬರಾಜು ವಿಭಾಗಕ್ಕೆ ಕೇಬಲ್ ಖರೀದಿಸುವ ಕಾಮಗಾರಿ. DMA/2023-24/WS/WORK_INDENT14473 | 10.00 | VAJRAKAYA ENTERPRISES KIRAN P R electrical license Contractor | MAHESHA.R Class'I' KPWD civil Contractor |
| | | | MAHESHA.R Class'I' KPWD civil Contractor | RIZWAN ENTERPRISES |

ಅನುಬಂಧ-02

ಕರ್ನಾಟಕ ಸರ್ಕಾರ

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

(ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು)

E-Mail :- dudc_burban@yahoo.com    Phone No-08022211372/352

ಸಂಖ್ಯೆ:ಜಿನಕೋ/ತಾ.ಶಾ/ಸಿಆರ್/16/2024-25    24-06-2024

## :: ಅಧಿಕೃತ ಜ್ಞಾಪನ ::

ವಿಷಯ: ಮಾದನಾಯಕನಹಳ್ಳಿ ನಗರಸಭೆಗೆ 2024-2025ನೇ ಸಾಲಿನ 15ನೇ ಹಣಕಾಸು ಯೋಜನೆಯ ಅನುದಾನದಡಿ ತಯಾರಿಸಲಾಗಿರುವ ಕ್ರಿಯಾಯೋಜನೆಗೆ ಅನುಮೋದನೆ ನೀಡುವ ಬಗ್ಗೆ

ಉಲ್ಲೇಖ:
1. ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಆಡಳಿತಾಧಿಕಾರಿಗಳು, ರವರ ಅಧ್ಯಕ್ಷತೆಯಲ್ಲಿ ದಿನಾಂಕ:11.06.2024 ರಂದು ನಡೆದ ಸಾಮಾನ್ಯ ಸಭೆಯ ವಿಷಯ ಸಂಖ್ಯೆ: 15
2. ಪೌರಾಯುಕ್ತರು, ನಗರಸಭೆ ಮಾದನಾಯಕನಹಳ್ಳಿ ರವರ ಪತ್ರದ ಸಂಖ್ಯೆ: ಮಾ.ನ.ಕಾ./ತಾ.ಶಾ//ಸಿಆರ್/74/2024 ದಿನಾಂಕ: 11.06.2024.

~*~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2024-25ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ಮಾದನಾಯಕನಹಳ್ಳಿ ನಗರಸಭೆಗೆ ರೂ.313.00 ಲಕ್ಷಗಳು ಹಂಚಿಕೆಯಾಗಿದ್ದು, ಉಲ್ಲೇಖ(1)ರ ರೀತ್ಯಾ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಆಡಳಿತಾಧಿಕಾರಿಗಳು ರವರ ಅಧ್ಯಕ್ಷತೆಯಲ್ಲಿ ದಿನಾಂಕ:11.06.2024 ರಂದು ನಡೆದ ಸಾಮಾನ್ಯ ಸಭೆಯ ವಿಷಯ ಸಂಖ್ಯೆ: 15 ರನ್ವಯ ಕ್ರಿಯಾಯೋಜನೆ ರೂಪಿಸಲಾಗಿದ್ದು, ಸದರಿ ಕ್ರಿಯಾಯೋಜನೆಗೆ ಅನುಮೋದನೆ ನೀಡಲು ಉಲ್ಲೇಖ(2)ರ ರೀತ್ಯಾ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ವಿವರ ಈ ಕೆಳಕಂಡಂತೆ ಇರುತ್ತದೆ.

**2024-25ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ಬಿಡುಗಡೆಯಾಗಿರುವ ಮೊತ್ತ ರೂ.313.00 ಲಕ್ಷಗಳು**

| ಕ್ರ.ಸಂ | ಕ್ರಿಯಾ ಯೋಜನೆ ವಿವರ | ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| A | Tied Grant ಶೇ.60%) | |
| 01 | ಕುಡಿಯುವ ನೀರಿನ ಕಾಮಗಾರಿಗಳು (ಮಳೆ ನೀರು ಕೊಯ್ಲು ಮತ್ತು ನೀರಿನ ಮರು ಬಳಕೆ ಒಳಗೊಂಡಂತೆ) ಕಾಯ್ದಿರಿಸಿದ ಮೊತ್ತ(ಶೇ.30%) | 93.90 |
| 02 | ಘನ ತ್ಯಾಜ್ಯ ವಸ್ತು ನಿರ್ವಹಣೆ ಕಾರ್ಯ/ಕಾಮಗಾರಿಗೆ ಕಾಯ್ದಿರಿಸಿದ ಮೊತ್ತ(ಶೇ.30%) | 93.90 |
| B | **Untied grant (ಶೇ.40%)** | |
| 03 | ರಸ್ತೆ ಮತ್ತು ಪಾದಚಾರಿ ಮಾರ್ಗಗಳ ಕಾಮಗಾರಿಗಳು, ಮಳೆ ನೀರು ಚರಂಡಿ, ಒಳಚರಂಡಿ ನಿರ್ಮಾಣ ಹಾಗೂ ಇತರೆ ಕಾಮಗಾರಿಗಳು. | 125.20 |
| | ಒಟ್ಟು ಮೊತ್ತ | 313.00 |

1. ಕುಡಿಯುವ ನೀರಿನ ಕಾಮಗಾರಿಗಳು (ಮಳೆ ನೀರು ಕೊಯ್ಲು ಮತ್ತು ನೀರಿನ ಮರು ಬಳಕೆ ಒಳಗೊಂಡಂತೆ) ಕಾಯ್ದಿರಿಸಿದ ಮೊತ್ತ(ಶೇ.30.%)= 93.90 ಲಕ್ಷಗಳು

| ಕ್ರ.ಸಂ | ಕ್ರಿಯಾಯೋಜನೆ ವಿವರ | ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1 | ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ದೊಂಬರ ಹಳ್ಳಿಯ ವಿದ್ಯಾನಗರ ಮತ್ತು ಮಾರುತಿ ಬಡಾವಣೆಯಲ್ಲಿ ಎರಡು ಕೊಳವೆಬಾವಿ ಕೊರೆದು ಪಂಪು ಮೋಟಾರ್ ಅಳವಡಿಸಿ ಪೈಪ್ ಲೈನ್ ಕಾಮಗಾರಿ. | 22.00 |
| 2 | ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಲಕ್ಷ್ಮಿಪುರದ ಮಾರುತಿ ಮತ್ತು ಸಾಯಿ ಬಡಾವಣೆಯಲ್ಲಿ ಕೊಳವೆಬಾವಿ ಕೊರೆದು ಪಂಪು ಮೋಟಾರ್ ಅಳವಡಿಸಿ ಪೈಪ್‌ಲೈನ್ ಕಾಮಗಾರಿ. | 12.00 |
| 3 | ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಚಿಕ್ಕಬಿದರಕಲ್ಲು 18ನೇ ಕ್ರಾಸ್ ಬಾಬು ರವರ ಮನೆಯಿಂದ ತಮ್ಮಯ್ಯ ರವರ ಮನೆವರೆಗೆ ಹಾಗೂ ಮೂರು ಅಡ್ಡರಸ್ತೆಗಳು ಮತ್ತು ರೆಡ್ಡಿಕಟ್ಟೆಯ ಹೇಮಂತ್ ರವರ ಮನೆಯಿಂದ ಗೋಪಾಲ್‌ಗೌಡರ ಮನೆವರೆಗೆ, 9ನೇ ಕ್ರಾಸ್ ಮೈನ್‌ರೋಡ್ ನಿಂದ ಸಿದ್ಧರಾಜುರವರ ಮನೆಯವರೆಗೆ, 5ನೇ ಕ್ರಾಸ್ ಮೈನ್‌ರೋಡ್‌ನಿಂದ ಜಯಂತ್‌ರವರ ಮನೆ ವರೆಗೆ 17ನೇ ಕ್ರಾಸ್ ಹನುಮಂತಪ್ಪ ರವರ ಮನೆಯಿಂದ ರಾಜಶೇಖರ್ ರವರ ಮನೆಯವರೆಗೆ ಪೈಪ್‌ಲೈನ್ ಕಾಮಗಾರಿ. | 15.00 |
| 4 | ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಗಂಗೊಂಡನಹಳ್ಳಿಯಲ್ಲಿ ಕೊಳವೆಬಾವಿ ಕೊರೆದು, ಪಂಪು ಮೋಟಾರ್ ಅಳವಡಿಸಿ ಪೈಪ್‌ಲೈನ್ ಕಾಮಗಾರಿ. | 9.00 |
| 5 | ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ತೋಟದ ಗುಡ್ಡದಹಳ್ಳಿ ಬೆನಕ ಲೇಔಟ್‌ನಲ್ಲಿ ಹೊಸದಾಗಿ ಕೊರೆದಿರುವ ಕೊಳವೆಬಾವಿಯಿಂದ ಮುಖ್ಯರಸ್ತೆವರೆಗೆ ಹಾಗೂ ಮುಖ್ಯರಸ್ತೆಯಿಂದ ರಾಜಕಾಲುವೆವರೆಗೆ ಹಾಗೂ ಭೂತಯ್ಯ ಲೇಔಟ್‌ನಲ್ಲಿ, ಮಾದವರದ ಸಿದ್ಧರಾಜು ರವರ ಮನೆಯಿಂದ ಜ್ಯೋತಿ ರವರ ಮನೆವರೆಗೂ ಹಾಗೂ ಕವಿತ ಟೀಚರ್‌ರವರ ಮನೆಯಿಂದ ಶೇಖರ್‌ರವರ ಮನೆಯವರೆಗೂ ಹಾಗೂ ಇಂದ್ರಪ್ರಸ್ಥ ಬಡಾವಣೆಯ ತೀರ್ಥಪ್ಪರವರ ಮನೆಯಿಂದ ಗಂಗೇಗೌಡರವರ ಮನೆಯವರೆಗೂ ಹಾಗೂ ಸಂತೋಷ್‌ರವರ ಮನೆಯಿಂದ ಕುಸುಮರವರ ಮನೆಯವರೆಗೂ ಪೈಪ್‌ಲೈನ್ ಕಾಮಗಾರಿ ಮತ್ತು ರವಿ ಕಿರ್ಲೋಸ್ಕರ್ ಲೇಔಟ್‌ನಲ್ಲಿ ಓವರ್‌ಹೆಡ್ ಟ್ಯಾಂಕ್‌ನಿಂದ ಡಿಸ್ಟ್ರಿಬ್ಯೂಷನ್ ಪೈಪ್‌ಲೈನ್‌ವರೆಗೆ ಪೈಪ್‌ಲೈನ್ ಲಿಂಕ್ ಕಾಮಗಾರಿ. | 18.00 |
| 6 | ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಚಿಕ್ಕಬಿದರಕಲ್ಲು ಸರ್ಕಾರಿ ಶಾಲೆಯ ಆವರಣದಲ್ಲಿ ಮಳೆ ನೀರು ಕೊಯ್ಲು ಅಳವಡಿಸುವ ಕಾಮಗಾರಿ ಹಾಗೂ ಕೆ.ಜಿ. ಲಕ್ಕೇನಹಳ್ಳಿ ಓವರ್ ಹೆಡ್‌ಟ್ಯಾಂಕ್ ಹತ್ತಿರ ಮಳೆ ನೀರುಕೊಯ್ಲುಅಭಿವೃದ್ಧಿ ಕಾಮಗಾರಿ | 17.90 |
| ಒಟ್ಟು ಮೊತ್ತ | | 93.90 |

2)ಘನತ್ಯಾಜ್ಯ ವಸ್ತು ನಿರ್ವಹಣೆ ಕಾರ್ಯ/ಕಾಮಗಾರಿಗೆ ಕಾಯ್ದಿರಿಸಿದ ಮೊತ್ತ(ಶೇ30%) 93.90 ಲಕ್ಷಗಳು

| ಕ್ರ.ಸಂ | ಕ್ರಿಯಾಯೋಜನೆವಿವರ | ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 01 | ಮಾದನಾಯಕನಹಳ್ಳಿ ನಗರಸಭೆಗೆ ಸಮಗ್ರ ಘನ ತ್ಯಾಜ್ಯ ವಸ್ತು ನಿರ್ವಹಣೆಯ ಅನುಮೋದಿತ ಡಿ.ಪಿ.ಆರ್. ರೀತ್ಯಾ ಒಟ್ಟು09 ಸಂಖ್ಯೆಯ ಆಟೋ ಟಿಪ್ಪರ್ ವಾಹನವನ್ನು ಖರೀದಿಸುವುದು. | 93.90 |
| ಒಟ್ಟು ಮೊತ್ತ | | 93.90 |

Untied grant

1)ರಸ್ತೆ ಮತ್ತು ಪಾದಚಾರಿ ಮಾರ್ಗಗಳ ಕಾಮಗಾರಿಗಳು, ಮಳೆ ನೀರುಚರಂಡಿ, ಒಳಚರಂಡಿ ನಿರ್ಮಾಣ ಹಾಗೂ ಇತರೆ ಕಾಮಗಾರಿಗಳು, ಕಾಯ್ದಿರಿಸಿದ ಮೊತ್ತ(ಶೇ.40%)=ರೂ125.20 ಲಕ್ಷಗಳು.

| ಕ್ರ.ಸಂ | ಕ್ರಿಯಾಯೋಜನೆವಿವರ | ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1 | ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ತೋಟದಗುಡ್ಡದಹಳ್ಳಿ ಪ್ರಕೃತಿ ಲೇಔಟ್ 3ನೇ ಮೈನ್ 3ನೇ ಕ್ರಾಸ್‌ನಲ್ಲಿರುವ ಸಿಮೆಂಟ್ ಶಾಪ್‌ರವರ ಮನೆಯಿಂದ ಸಿದ್ದಪ್ಪರವರ ಮನೆಯವರೆಗೆ ಕಾಂಕ್ರೀಟ್ ಚರಂಡಿ ನಿರ್ಮಾಣ ಕಾಮಗಾರಿ. | 10.00 |
| 2 | ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ತೋಟದಗುಡ್ಡದಹಳ್ಳಿ ಗ್ರಾಮದ ಕುಂಟಮ್ಮ ಲೇಔಟ್‌ನ ನಾರಾಯಣಪ್ಪರವರ ಮನೆಯಿಂದ ರಾಜಕಾಲುವೆವರೆಗೆ ಕಾಂಕ್ರೀಟ್ ಚರಂಡಿ ನಿರ್ಮಾಣ ಕಾಮಗಾರಿ | 8.00 |
| 3 | ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಹನುಮಂತ ಸಾಗರ ಗ್ರಾಮದ ಹನುಮಂತ ಸಾಗರ ಶಾಲೆಯಿಂದ ಶ್ರೀರಾಮ ಬಡಾವಣೆವರೆಗೆ ರಸ್ತೆ ಮತ್ತುಕಾಂಕ್ರೀಟ್ ಚರಂಡಿ ನಿರ್ಮಾಣ ಕಾಮಗಾರಿ. | 18.00 |
| 4 | ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಮಾದಾವರ ಗ್ರಾಮದ ಜನತಾ ಕಾಲೋನಿಯ ತಾಯಪ್ಪರವರ ಮನೆಯಿಂದ ಸಾಕಮ್ಮ ರವರ ಮನೆಯವರೆಗೆ ರಸ್ತೆಯ ಎರಡೂ ಬದಿ ಕಾಂಕ್ರೀಟ್ ಚರಂಡಿ ಮತ್ತು ಸ್ಲಾಬ್ ನಿರ್ಮಾಣ ಹಾಗೂ ಡೆಕ್‌ಸ್ಲಾಬ್ ಅಳವಡಿಸುವ ಕಾಮಗಾರಿ. | 14.20 |
| 5 | ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಲಕ್ಷ್ಮೀಪುರ ಸಂಜೀವಿನಿ ಲೇಔಟ್‌ನ ಗೋಪಾಲ್‌ರವರ ಮನೆಯಿಂದ ಟಿ.ಪಿ.ಪ್ರಕಾಶ್ ರವರ ಮನೆಯವರೆವಿಗೂ ಮತ್ತು ಮಂಜುನಾಥ್‌ರವರ ಮನೆಯಿಂದ ಸಿದ್ದಲಿಂಗಪ್ಪರವರ ಮನೆಯವರೆಗೆ ರಸ್ತೆ ನಿರ್ಮಾಣ ಕಾಮಗಾರಿ. | 20.00 |
| 6 | ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಮಾದನಾಯಕನಹಳ್ಳಿ ಗ್ರಾಮದ ಸ್ಮಶಾನದ ಹಿಂದೆಯಿಂದ ಬಸವರಾಜುರವರ ಮನೆಯವರೆಗೆ ಕಾಂಕ್ರೀಟ್ ಚರಂಡಿ ನಿರ್ಮಾಣ ಕಾಮಗಾರಿ. | 13.00 |
| 7 | ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಅಂಚೆಪಾಳ್ಯ ಗ್ರಾಮದ ಶಿವಶಕ್ತಿನಗರ ಚಂದ್ರಮ್ಮರವರ ಮನೆಯಿಂದ ಬಿ.ಬಿ.ಎಂ.ಪಿ ರಾಜಕಾಲುವೆವರೆಗೆ ಕಾಂಕ್ರೀಟ್‌ಚರಂಡಿ ನಿರ್ಮಾಣ ಕಾಮಗಾರಿ. | 6.00 |
| 8 | ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಅಂಚೆಪಾಳ್ಯ ಗ್ರಾಮದ ಚಿಕ್ಕಹರಳೀ ಮಠದ ಹತ್ತಿರ ರುದ್ರಪ್ಪರವರ ಮನೆಯಿಂದ ಕೃಷ್ಣಾಜಿ ರವರ ಮನೆಯ ವರೆಗೆ ಕಾಂಕ್ರೀಟ್ ಚರಂಡಿ ನಿರ್ಮಾಣ ಕಾಮಗಾರಿ. | 7.00 |
| 9 | ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಗಂಗೊಂಡನಹಳ್ಳಿ ಶಾಂತಿನಗರ ಸರ್ಕಲ್‌ನಿಂದ ಕೆ.ಜಿ.ಶ್ರೀಕಂಠಪುರ ಮುಖ್ಯರಸ್ತೆ ಹಾಗೂ ಅಡ್ಡರಸ್ತೆಗಳಿಗೆ ಕಾಂಕ್ರೀಟ್ ಚರಂಡಿ ನಿರ್ಮಾಣ ಕಾಮಗಾರಿ. | 17.00 |
| 10 | ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಭೀಮೇಶ್ವರ ನಗರದ ಮಾರುತಿ ಥಿಯೇಟರ್ ಮುಂಭಾಗ ಬೈರಣ್ಣರವರ ಮನೆಯಿಂದ ಆದಿಬೈರವರವರ ನಿವೇಶನದವರೆಗೆ ಕಾಂಕ್ರೀಟ್ ಚರಂಡಿ ನಿರ್ಮಾಣ ಕಾಮಗಾರಿ. | 12.00 |
| | ಒಟ್ಟು ಮೊತ್ತ | 125.20 |

ಮುಂದುವರೆದು ಪೌರಾಯುಕ್ತರು, ನಗರಸಭೆ, ಮಾದನಾಯಕನಹಳ್ಳಿ ರವರ ಪ್ರಸ್ತಾವನೆಯಲ್ಲಿ 2024-25ನೇ ಸಾಲಿನ

15ನೇ ಹಣಕಾಸು ಯೋಜನೆಯಡಿ ಮಾದನಾಯಕನಹಳ್ಳಿ ನಗರಸಭೆ [illegible] ದಿನಾಂಕ:11.06.2024 ರಂದು ನಡೆದ ರೀತ್ಯಾ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಆಡಳಿತಾಧಿಕಾರಿಗಳು ರವರ ಅಧ್ಯಕ್ಷತೆಯಲ್ಲಿ ಸಾಮಾನ್ಯ ಸಭೆಯ ವಿಷಯ ಸಂಖ್ಯೆ: 15 ರನ್ವಯ ಕ್ರಿಯಾಯೋಜನೆ ರೂಪಿಸಲಾಗಿದ್ದು ಸದರಿ ಕ್ರಿಯಾಯೋಜನೆಗೆ ಅನುಮೋದನೆ ನೀಡಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಮೋದನೆ ನೀಡಿದೆ. (4)

:: ಷರತ್ತುಗಳು ::

1. ಕಾಮಗಾರಿಗಳನ್ನು 15ನೇ ಹಣಕಾಸು ಮಾರ್ಗಸೂಚಿಯನ್ವಯ ಹಾಗೂ ಕೆ.ಪಿ.ಪಿ.ಪಿ ಮೂಲಕ ಟೆಂಡರ್ ಕರೆದು ನಿರ್ವಹಿಸತಕ್ಕದ್ದು.
2. ಕಾಮಗಾರಿಗಳನ್ನು ಅಲ್ಪಾವಧಿ ಟೆಂಡರ್ ಕರೆಯಲು ಅನುಮತಿ ನೀಡಿದೆ.
3. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ ಮತ್ತು ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
4. ಕಾಮಗಾರಿಗಳನ್ನು ಶೀಘ್ರವಾಗಿ ಹಾಗೂ ಗುಣಮಟ್ಟದೊಂದಿಗೆ ನಿರ್ವಹಿಸಲು ಬಿಡಿ ಬಿಡಿಯಾಗಿ ಟೆಂಡರ್ ಕರೆಯದೇ ಪ್ಯಾಕೇಜ್ ರೀತಿಯಲ್ಲಿ ಟೆಂಡರ್ ಕರೆಯುವುದು.
5. ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ಪಡೆಯತಕ್ಕದ್ದು.
6. ಸದರಿ ಕಾಮಗಾರಿಗಳ ನಿರ್ವಹಣೆಗೆ ತಗಲುವ ಹೆಚ್ಚುವರಿ ಅನುದಾನವನ್ನು ಸ್ವಂತ ನಿಧಿಯಿಂದ ನಿಯಮಾನುಸಾರ ಭರಿಸತಕ್ಕದ್ದು.
7. ಕಾಮಗಾರಿಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಮತ್ತು ಪ್ರಗತಿಯ ಮಟ್ಟದಲ್ಲಿ ಹಾಗೂ ಕಾಮಗಾರಿಯ ಮುಕ್ತಾಯದ ನಂತರದಲ್ಲಿ ಒಂದು ಕಾಮಗಾರಿಗೆ ಕನಿಷ್ಠ 10 ರಿಂದ 15 ಛಾಯಾಚಿತ್ರಗಳನ್ನು ಲ್ಯಾಂಡ್ ಮಾರ್ಕ್ ಪ್ರಕಾರ ಮೇಲಿನ ಹಂತಗಳಲ್ಲಿ ತೆಗೆದು ಸಂಬಂಧಪಟ್ಟವರಿಂದ ದೃಢೀಕರಿಸಿ ಕಡತದಲ್ಲಿ ಇರಿಸತಕ್ಕದ್ದು.
8. ಕಾಮಗಾರಿಗಳ ಗುಣಮಟ್ಟವನ್ನು ಕಾಪಾಡುವುದು ಕಿರಿಯ ಅಭಿಯಂತರರು/ ಸಹಾಯಕ ಅಭಿಯಂತರರು / ಸಹಾಯಕ ಕಾರ್ಯಪಾಲಕ ಅಭಿಯಂತರರು ಜವಾಬ್ದಾರಿಯಾಗಿರುತ್ತಾರೆ. ಯಾವುದೇ ಲೋಪದೋಷಗಳು ಕಂಡುಬಂದಲ್ಲಿ ಸಂಬಂಧಪಟ್ಟ ಅಭಿಯಂತರರು ಹಾಗೂ ಪೌರಾಯುಕ್ತರು/ಮುಖ್ಯಾಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.
9. ಕಾಮಗಾರಿ ಪ್ರಾರಂಭಕ್ಕೆ ಮುನ್ನ ಸ್ಥಳದ ಡಿಜಿಟಲ್ ಫೋಟೋ ದಿನಾಂಕ ಸಹಿತ / Latitude, Langitude ಸಹಿತ ತೆಗೆದು ಕಾಮಗಾರಿ ಈ ಹಿಂದೆ ಮಾಡಿಲ್ಲ ಎಂದು ದೃಢೀಕರಿಸುವುದು.
10. ಕಾಮಗಾರಿ ಪ್ರಗತಿ ವೇಳೆ ಕಾಮಗಾರಿ ಸ್ಥಳದ ಡಿಜಿಟಲ್ ಫೋಟೋ ದಿನಾಂಕ ಸಹಿತ / Latitude, Langitude ಸಹಿತ ತೆಗೆದು ಲಗತ್ತಿಸುವುದು.
11. ಕಾಮಗಾರಿ ಪೂರ್ಣಗೊಂಡ ಮೇಲೆ ಕಾಮಗಾರಿ ಸ್ಥಳದ ಡಿಜಿಟಲ್ ಫೋಟೋ ದಿನಾಂಕ ಸಹಿತ / Latitude, Langitude ಸಹಿತ ತೆಗೆದು ಲಗತ್ತಿಸುವುದು.
12. ಕಾಮಗಾರಿ ಬಿಲ್ ದೃಢೀಕರಿಸಿ ಸಹಿಮಾಡುವ ಸಂಬಂಧಿಸಿದ ಕಿರಿಯ ಅಭಿಯಂತರರು / ಸಹಾಯಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು/ ಕಾರ್ಯಪಾಲಕ ಅಭಿಯಂತರರರು ಲೋಪದೋಷಗಳಿಗೆ ಜವಾಬ್ದಾರರಾಗಿರುತ್ತಾರೆ.
13. ಟೆಂಡರ್ ಕರೆಯುವ / ಅನುಮೋದನೆಯಲ್ಲಿ ಆಗುವ ಲೋಪದೋಷಗಳಿಗೆ ಟೆಂಡರ್ ಕರೆಯುವ ಅನುಮೋದಿಸುವ ಸಂಬಂಧಿಸಿದ ಅಧಿಕಾರಿಗಳು ಜವಾಬ್ದಾರರಾಗಿರುತ್ತಾರೆ ಹಾಗೂ ಎಲ್ಲಾ ಕಾಮಗಾರಿಗಳ ತಾಂತ್ರಿಕ ದಾಖಲಾತಿಗಳ ಅನುಮೋದನೆಯನ್ನು ಈ ಕಛೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಕಾರ್ಯಪಾಲಕ ಅಭಿಯಂತರರಿಂದ ಅನುಮೋದನೆ ಪಡೆಯತಕ್ಕದ್ದು.
14. ಸಮಂಜಸವಾದ ತಾಂತ್ರಿಕ ಅಂಶಗಳನ್ನು ಅಳವಡಿಸಿಕೊಳ್ಳುವುದು ಮತ್ತು ಅಳವಡಿಸಿಕೊಳ್ಳಲು ತತ್ಸಂಬಂಧ ಸಕಾರಣಗಳ Field Report ವರದಿ/ತಾಂತ್ರಿಕ ವರದಿ ಅಳವಡಿಸಿಕೊಳ್ಳುವುದು, ಲೋಪದೋಷಗಳಿಗೆ ಸಂಬಂಧಿಸಿದ ಅನುಮೋದನೆ ಪ್ರಾಧಿಕಾರವೇ ಹೊಣೆಗಾರರಾಗಿರುತ್ತಾರೆ.
15. ಕ್ರಿಯಾಯೋಜನೆಯ ಕೊಳವೆಬಾವಿ/ಬೋರ್‌ವೆಲ್ ಕೊರಿಯುವ ಕಾಮಗಾರಿಗಳಿಗೆ ಸ್ಥಳಗಳನ್ನು ಭೂ ವಿಜ್ಞಾನಿಗಳಿಂದ ಜಲ ಬಿಂದುಗಳನ್ನು ಗುರ್ತಿಸಿ, ನಂತರ ಬೋರ್‌ವೆಲ್ ಕೊರೆಯತಕ್ಕದು. ಹಾಗೂ ನೀವುಗಳು ಸಲ್ಲಿಸಿರುವ ಸ್ಥಳಗಳಲ್ಲಿ ಜಲಬಿಂದುಗಳು ಸಿಗದಿದ್ದಲ್ಲಿ, ಮತ್ತೊಂದು ಸ್ಥಳವನ್ನು ಗುರುತಿಸಿ ಸದರಿ ಸ್ಥಳಗಳಿಗೆ ಅನುಗುಣವಾಗಿ ಕ್ರಿಯಾಯೋಜನೆಯನ್ನು ಈ ಕಛೇರಿಯಿಂದ ಅನುಮೋದನೆ ಪಡೆಯತಕ್ಕದ್ದು.
16. ಬೋರ್‌ವೆಲ್ ಕೊರೆದ ನಂತರ ಸ್ಕ್ಯಾನಿಂಗ್ ಯಂತ್ರದಿಂದ ಹಾಳವನ್ನು ಮತ್ತು Casing Pipe ಅಳವನ್ನು ಛಾಯಾ ಚಿತ್ರದೊಂದಿಗೆ ದೃಢೀಕರಿಸತಕ್ಕದ್ದು.
17. ಕರ್ನಾಟಕ ಪುರಸಭಾ ಕಾಯ್ದೆ 1964ರ ನಿಯಮಗಳನ್ನು ಪಾಲಿಸುವುದು.
18. ಮೇಲ್ಕಂಡ ಕಾಮಗಾರಿ ಬೇರೆಯಾವುದೇ ಯೋಜನೆಯಡಿ ಪುನರಾವರ್ತನೆಯಾದಲ್ಲಿ ಸಂಬಂಧಿಸಿದ ಪೌರಾಯುಕ್ತರು/ಮುಖ್ಯಾಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ಜಿಲ್ಲಾಧಿಕಾರಿಗಳು,
ಬೆಂಗಳೂರು ನಗರ ಜಿಲ್ಲೆ,
ಬೆಂಗಳೂರು.

ರವರಿಗೆ,

ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ

ABSTRACT REPORT

SFC DRINKING WATER PROGRAMME

Rs. in Lakhs

| NO | District | Name Of the Town | ULB Type | YEAR | Grants Allocation | Grants Released | Expenditure | Total Approved Works | Completed Works | Works Started/Ongoing | Under Tender Process/Tender to be Invited |
|---|---|---|---|---|---|---|---|---|---|---|---|
| | Bengaluru Urban | Madanayakanahalli | CMC | 2021-22 | 10.00 | 10.00 | 7.58 | 3 | 3 | 0 | 0 |
| | | | | 2022-23 | 10.00 | 10.00 | 8.17 | 2 | 2 | 0 | 0 |
| | | | | 2023-24 | 8.23 | 8.23 | 2.76 | 3 | 1 | 2 | 0 |
| | | | | 2024-25 | 2.36 | 2.36 | 0.00 | 0 | 0 | 0 | 0 |
| | | | | **TOTAL** | **30.59** | **30.59** | **18.51** | **8** | **6** | **2** | **0** |

for Chief Project Officer
Directorate of Municipal Adminisration

## Workwise Progress of SFC Drinking Water 2021-22 Report

| | | | | | Rs. in Lakhs | | |
|---|---|---|---|---|---|---|---|
| o | DistrictName | UlbName | Sector Name | Work Name | Estimate Cost | Expenditure Cost | Work Status |
| | Bengaluru Urban | Madanayakanahalli | Water Supply | Providing lying of PVC pipeline from mnj layout to VSSN layout in madanayakanahalli CMC | 2.00 | 4.66 | Work Completed |
| | Bengaluru Urban | Madanayakanahalli | Water Supply | providing and fixing of pump motor and cable from sri anjaneyaswamy temple near hanumanthana gowdana palya loto layout madavara village nandishwara layout near devaraj house in madanayakanahalli cmc limits | 3.00 | 2.92 | Work Completed |
| | Bengaluru Urban | Madanayakanahalli | Water Supply | Drilling of borewell and Installation of pump and motor from GOVT school road karekalu near KG Lakkenahalli in madanayakanahalli CMC Limits | 5.00 | 0.00 | Work Completed |
| | | | | TOTAL | 10.00 | 7.58 | |

## Workwise Progress of SFC Drinking Water 2022-23 Report

| | | | | | Rs. in Lakhs | | |
|---|---|---|---|---|---|---|---|
| o | DistrictName | UlbName | Sector Name | Work Name | Estimate Cost | Expenditure Cost | Work Status |
| | Bengaluru Urban | Madanayakanahalli | Water Supply | Drilling of bore well and fixing of pump motor at Maruthi extn of Lakshmipur avillage in CMC Madanayakanahalli limit | 5.00 | 4.06 | Work Completed |
| | Bengaluru Urban | Madanayakanahalli | Water Supply | Providing and laying of PVC pipeline from VS enclave badavane Madanayakanahalli and siddekatte from gangondanahalli in madanayakanahalli CMC Limits | 5.00 | 4.11 | Work Completed |
| | | | | TOTAL | 10.00 | 8.17 | |

## Workwise Progress of SFC Drinking Water 2023-24 Report

| | | | | | Rs. in Lakhs | | |
|---|---|---|---|---|---|---|---|
| o | DistrictName | UlbName | Sector Name | Work Name | Estimate Cost | Expenditure Cost | Work Status |
| | Bengaluru Urban | Madanayakanahalli | Water Supply | Laying of pipe line at Hanumegowda thota to Maruthi layout from Hottappanapalya in Madanayakanahalli cmc limits | 2.36 | 1.87 | Work Completed |
| | Bengaluru Urban | Madanayakanahalli | Water Supply | Laying of pipe line From Thotadagudddahalli Andanappa circle OHT Tank to Sapthagiri Bar Main road in Madanayakanahallli CMC Limits | 4.72 | 0.00 | Work Started |
| | Bengaluru Urban | Madanayakanahalli | Water Supply | Laying of PVC pipe line at Shivakumara swamiji Layout Nishanth Water supply building to Shivakumara Swamiji Layout Main Road in Madanayakanahallli CMC Limits | 1.15 | 0.00 | Work Started |
| | | | | TOTAL | 8.23 | 1.87 | |

# Workwise Progress of SFC Drinking Water 2022-23 Report

| | | | | | | Rs. in Lakhs | | |
|---|---|---|---|---|---|---|---|---|
| No | DistrictName | UlbName | Sector Name | Work Name | Contractor/Entrusted Agency Name | Estimate Cost | Expenditure Cost | Work Status |
| 1 | Bengaluru Urban | Madanayakanahalli | Water Supply | Drilling of bore well and fixing of pump motor at Maruthi extn of Lakshmipura village in CMC Madanayakanahalli limit | Shashikumar | 5 | 4.0648 | Work Completed |
| 2 | Bengaluru Urban | Madanayakanahalli | Water Supply | Providing and laying of PVC pipeline from VS enclave badavane Madanayakanahalli and siddekatte from gangondanahalli in madanayakanahalli CMC Limits | MAHESHA R | 5 | 4.1084 | Work Completed |

# Workwise Progress of SFC Drinking Water 2023-24 Report

| lo | DistrictName | UlbName | Sector Name | Work Name | Contractor/Entrusted Agency Name | Estimate Cost | Expenditure Cost | Work Statu |
|---|---|---|---|---|---|---|---|---|
| | | | | | | Rs. in Lakhs | | |
| 4 | Bengaluru Urban | Madanayakanahalli | Water Supply | Laying of pipe line at Hanumegowda thota to Maruthi layout from Hottappanapalya in Madanayakanahalli cmc limits | | 2.36 | 1.8746 | Work Compl |
| 5 | Bengaluru Urban | Madanayakanahalli | Water Supply | Laying of pipe line From Thotadagudddahalli Andanappa circle OHT Tank to Sapthagiri Bar Main road in Madanayakanahallli CMC Limits | | 4.72 | 0 | Work Start |
| 6 | Bengaluru Urban | Madanayakanahalli | Water Supply | Laying of PVC pipe line at Shivakumara swamiji Layout Nishanth Water supply building to Shivakumara Swamiji Layout Main Road in Madanayakanahallli CMC Limits | | 1.15 | 0 | Work Start |